(ಗೊಂದಲ)

ಶ್ರೀ ತನ್ವೀರ್ ಸೇಠ್ : ಒಂದು ಸದನ ಸಮಿತಿ ಮಾಡಿದಾಗ ಇವರು ಏನೇನು ನಿಯಮಾವಳಿಯನ್ನು ಮಾಡುತ್ತಿದ್ದಾರೆ, ಏನೇನು ಮಾರ್ಗಸೂಚಿಗಳನ್ನು ಮಾಡುತ್ತಿದ್ದಾರೆ ಎಂದು ನೋಡಬಹುದು.

(ಗೊಂದಲ)

ಅಧ್ಯಕ್ಷರು: ಈ ವಿಷಯ ತಮಗೆ ಬರುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ, ತಾವು ಹೇಗೆ ಪ್ರಶ್ನೆ ಮಾಡುತ್ತೀರಿ ?

(ಗೊಂದಲ)

ಶ್ರೀ ತನ್ವೀರ್ ಸೇಠ್: ಇವೆಲ್ಲ ಸರಿಪಡಿಸುವುದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಇದನ್ನು ಚರ್ಚೆಗೆ ಹಾಕೋಣ. ಅದರಲ್ಲಿ ನೀವೂ ಭಾಗವಹಿಸಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ನಿಯಮ 69 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಖಂಡಿತ ಚರ್ಚೆ ಮಾಡೋಣ. ಮಾನ್ಯ ಬಣಕಾರ್‌ರವರು ಮಾತನಾಡುವುದು.

3. ವಿಷಯ: ವಸತಿ ಯೋಜನೆಯ ವಿವಿಧ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಯು.ಬಿ.ಬಣಕಾರ್(ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನಿಂದ 2013–14ನೇ ಸಾಲಿನವರೆಗೆ ವಸತಿ ಯೋಜನೆಯ ವಿವಿಧ ಯೋಜನೆಗಳಲ್ಲಿ 351 ಮನೆಗಳು Not O.K. ಆದ ಕಾರಣದಿಂದ ಫಲಾನುಭವಿಗಳಿಗೆ ಹಣ ತಲುಪಿರುವುದಿಲ್ಲ. ನಿನ್ನೆ ದಿವಸ ಅವರುಗಳು ಹಿರೇಕೆರೂರು ತಾಲ್ಲೂಕು ಪಂಚಾಯಿತಿಯಲ್ಲಿ ಸತ್ಯಾಗ್ರಹವನ್ನು ಮಾಡಿ ಅಧಿಕಾರಿಗಳನ್ನು ಬಂಧನದಲ್ಲಿಟ್ಟಿದ್ದರು. ಆ ಕಾರಣದಿಂದ Not O.K.

ಆಗಿರುವಂತಹ 351 ಮನೆಗಳಿಗೆ ಮಾನವೀಯತೆಯ ದೃಷ್ಟಿಯಿಂದ ಹಣ ಬಿಡುಗಡೆ ಮಾಡುವ ಸಂಬಂಧ ಮಾನ್ಯ ವಸತಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವುದರಲ್ಲಿ ಅರ್ಥ ಇದೆ. ನಾವು ಅಲ್ಲಿ ಸುಮ್ಮಸುಮ್ಮನೆ Cancel ಮಾಡಿರುವುದಿಲ್ಲ ಮತ್ತು unblock ಮಾಡಿರುವುದಿಲ್ಲ. ಅನರ್ಹತೆ ಎಂದು Prove ಆದ ಮೇಲೆಯೇ Cancel ಮಾಡಿದ್ದೇನೆ. ನಾನು ಹೆಚ್ಚಿಗೆ ಟೈಮ್ ತೆಗೆದುಕೊಂಡು ಮಾತನಾಡುವುದಿಲ್ಲ. ನೀವು ಏನಾದರೂ ಮಾಡಿ ಸಿಇಓ ಹತ್ತಿರ ಮಾತನಾಡಿ, ಅದಕ್ಕೆ ಅರ್ಹತೆ ಇದೆ ಎಂದು ಹೇಳಿದರೆ ನಿಮಗೆ ಹಣ ಬಿಡುಗಡೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಮಾನ್ಯ ಸಿ.ಟಿ.ರವಿ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೇ ನಿಮ್ಮದು ಎರಡೂ ಆಗಿದೆ. ಇದನ್ನು ಮುಂದಕ್ಕೆ ಹಾಕುತ್ತೇನೆ. ಮಾನ್ಯ ಬೋಪಯ್ಯನವರೆ, ತಾವು ಮಾತನಾಡಿ.

4. ವಿಷಯ: ಹಿಂದೆ ಇದ್ದ Circular ಅನ್ನು ಮುಂದುವರೆಸುವ ಬಗ್ಗೆ

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಈ ಬಿಸಿಎಂ ಮತ್ತು ಎಸ್‌ಸಿ:ಎಸ್‌ಟಿ ಹಾಸ್ಟೆಲ್‌ಗಳಿಗೆ ಸಂಬಂಧಿಸಿದಂತೆ ಒಂದು Circular ಅನ್ನು ಸರ್ಕಾರವು ಹೊರಡಿಸಿದೆ. ಹಿಂದೆ ಏನು 50 ಸೀಟ್ ಇತ್ತು ಅದನ್ನು ಈಗ 35 ಸೀಟ್ ಎಂದು ಮಾಡಿ ಎಂಬ ಬಗ್ಗೆ ಸುತ್ತೋಲೆಯನ್ನು ಕಳುಹಿಸಿದ್ದಾರೆ.

ಅಧ್ಯಕ್ಷರು : ಹಿಂದೆ ಏನು Circular ಇತ್ತೋ ಅದನ್ನು ಈಗ ಅದನ್ನು ಮುಂದುವರಿಸಬೇಕೆಂದು ಕೇಳುತ್ತೀರಲ್ಲವೇ ?

ಶ್ರೀ ಕೆ.ಜಿ.ಬೋಪಯ್ಯ: ನಾನು ಈ ಹಿಂದೆ ನೀವು ಮಾಡಿರುವುದು ಸರಿಯಲ್ಲವೆಂದು ಪತ್ರವನ್ನೂ ಸಹ ಬರೆದಿದ್ದೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಹಿಂದೆ ಎಷ್ಟು ಸೀಟ್ ಇತ್ತೋ ಅದನ್ನು continue ಮಾಡಿ.